Regd.No. M. 1292 ॥ सत्यान्नास्ति परोधर्मः ॥ ಬಿಡಿ ಪ್ರತಿ 3 ಪೈ

ಸತ್ಯವಾದಿ

ಆಫೀಸ್: ರಾಮರಾಜ ಅಗ್ರಹಾರ ಮೈಸೂರು. ಪ್ರತಿ ಗುರುವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ 1-8-0

ಸಂಪುಟ 7] ಮೈಸೂರು, ಗುರುವಾರ 29 ನೆ ಜನವರಿ 1925 [ಸಂಚಿಕೆ 13

ಇನಾಂ I. ಇನಾಂ II.

ರೇಷ್ಮೆ ಪಂಜೆ ಅಟೋಮೋಹಿನಿ ಸೆಂಟ್.

ಈ ನಕ್ಷೆಯಲ್ಲಿ ಕಂಡ ಇಂಕಿಲ್ಲದ್ದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಕ್ಯಾರೆಟ್ ಭಂಗಾರದ ಮುಳ್ಳು ಹಾಕಿರುತ್ತದೆ. ಇದರಿಂದ ಬರೆಯುವುದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವುದು ಈ ತಿಂಗಳು ಒಳಗ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಜೆ ಅಟೋಮೋಹಿನಿ ಸೆಂಟ್ ಇನಾಮು ಸಹಿತ ರೂ. 1—8—0.

ನಿಮಗೆ ಗಟ್ಟಿಯಾದ ಗಡಿಯಾರಗಳು ಬೇಕೊ ? ನಿಮಗೆ ಸುಲಭ ಖರೀದಿಗೆ ದೊರೆಯುವುದು.



ಇದು ನೋಡುವುದಕ್ಕೆ ಅಂದವಾಗಿಯೂ ಗಟ್ಟಿಯಾದ ಸಾಮಾನುಗಳಿಂದಲೂ ಮಾಡಲ್ಪಟ್ಟಿದೆ. ಸರಿಯಾದ ಕಾಲವನ್ನು ತೋರಿಸುವುದು

1. ಪಾಕೆಟ್ ಲೀವರ್ ಗಡಿಯಾರ ರೂ. 5-0-0.
2. ನಿಕ್ಕಲ್ ರೌಂಡ್ ರಿಸ್ಟ್‌ವಾಚ್ ಚಕ್ಕಳದ ಪಟ್ಟಿಸಹಿತ ರೂ. 5-8-0.
3. ನಿಕ್ಕಲ್ 4 ಮೂಲೆ ರಿಸ್ಟ್‌ವಾಚ್ ಚಕ್ಕಳದ ಪಟ್ಟಿಸಹಿತ ರೂ. 6-0-0.
4. ನಿಕ್ಕಲ್ 8 ಮೂಲೆ ರಿಸ್ಟ್‌ವಾಚ್ ಚಕ್ಕಳದ ಪಟ್ಟಿಸೆ-ತ ರೂ 7-0-0.

ನಮ್ಮ ವಿಳಾಸ—ಹೆಚ್. ಕೆ. ಸಿಂಗ್ ಆಂಡ್ ಕೊ
ನಂ. 39. ಪರಮಾನಂದಮೊದಲಿ ಬೀದಿ,
ಮಿಟ್ಟೋಸ್ಸ್, ಮದರಾಸ್.

ಬೆಳಗಾಂನಲ್ಲಿ ಸೇರಿದ ರಾಷ್ಟ್ರಸಭೆಯ ಏನ ಜನು ರೂಪಾಯಿ ೧೯೭೦೦೦ ಖರ್ಚು ರೂಪಾ ೭೦೦೦. ಮಹಾಸಭೆಗೆ ಬಂದಿದ್ದವರು ಮಂದಿ. ಡೆಲಿಗೇಟರು ಮಾತ್ರ

ಎಲ್ಲಾ ಭಾಗಗಳಲ್ಲಿನ ಉಪ್ಪಮ ನಗಳನ್ನು ಇಂಗ್ಲೆಂಡಿಗೆ ತರಿಸಿಕೊ ಸೂನಾಗಿದೆ. ಇಂಡಿಯಾದ ದನಗ ಸ್ಲುವುದಕ್ಕೆ ಆತಂಕವಿರುವ ಕಾಸ್ತೂ ಇಲ್ಲಿ ಇಲ್ಲ.

ನ ಕುಮಾರಿ ನಿಂಬಾಳಕರ ಎಂಬ ತರು ಸೆಟ್ರಿಕ್ ಪರೀಕ್ಷೆಯಲ್ಲಿ ತಾನು ಪ್ಯಾ ಲ್ಲವೆಂದು ಚಿಂತೆಯಿಂದ ಹೊಳೆಗೆ ಬಿದ್ದು ಡಳು. ಪರೀಕ್ಷೆಯ ಗುಣವನ್ನು ಮು ಕಾಣದೇಕಾಯಿತು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೇಯಿಂಟಿಂಗ್ ಎಲಾರ್ಜುಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ ಮಾಡುವೆವು. ಈ ಒಂದು ತಿಂಗಳವರಿಗೆ 15 12 ಸೈಜು ಎಲಾರ್ಜುಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರೂಪಾಯಿಗೆ ಮಾಡಿ ಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

ಭಾರತ ಸರ್ವಸ್ವ

ಭುಂಕಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನೀದೇವಿಯವರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುವುದರ ಕನ್ನಡ ಪರಿವರ್ತನ ಕ್ರಯ 1 ಆಣೆ. ಒಂದೂವರೆಆಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು

MYSORE GOVERNMENT
LOAN BONDS
&
SHARES OF PROMINENT
COMPANIES

BOUGHT & SOLD

For Particulars apply to
THE SEMAH ELISHA COMPANY
MYSORE

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇನೆ ಮತ್ತು ಬಿಕರಿ ಮಾಡುತ್ತೇವೆ.

ವಿಳಾಸ:—ಸೇಮಾ ಇಲೈಶಾ ಕಂಪೆನಿ,
ಮೈಸೂರು

ಅಲಪ್ಪಿಯಲ್ಲಿ ಗೆಂಡಿಹೆಂಡರಿಬ್ಬರಿಗೂ ಜಗಳವಾಗಿ ತಪ್ಪಿಸಿಕೊಂಡ ಹೆಂಡತಿಯ ಬದಲಾಗಿ ಗಂಡನು ಮಗುವನ್ನು ಕಾಲುಹಿಡಿದೆತ್ತಿ ಬಡೆದುಕೊಂದುಹಾಕಿ ತನ್ನ ಸಿಟ್ಟನ್ನು ಸವಾಹಿಸಿಕೊಂಡನು. ಅವನನ್ನು ಬಂಧನದಲ್ಲಿಟ್ಟಿರುವರು.

೧೦೦೦ ರೂಪಾಯಿಗಳ ಬಹುಮಾನ ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ತ್ರೀಸಂಗಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದ್ದರೂ, ದೋಷರಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು ಅಜೀರ್ಣ, ಮೈಲಬದ್ಧತೆ, ವೆದುಳಿನಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವದು ಕಾಬೂಲ್ ಕಂದಹಾರಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕದೇವಗಳಿಂದಲೂ, ಅಫ್ರಿಕ ಬರ್ಮ ಪೀನಾಂಗ್ ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧಾರಪಡಿಸುವವರಿಗೆ ಮೇಲೆಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವವು. ಅನುಪಾನಪತ್ರಿಕೆಯು ಡಬ್ಬಿಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು

ಕ್ರಯ ಡಬ್ಬಿ 1 ಕ್ಕೆ ರೂ. 2—0—0. ಟಪ್ಪಾಲು ಖರ್ಚಿಗಾಗಿ ೩ ಡಬ್ಬಿಗಳಿಗೆ ೮ ಆಣೆ ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸು ತರಿಸಿ ನೋಡಿಕೊಳ್ಳಬಹುದು.

ಟೆಲಿಗ್ರಾಫ್ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ
ವಿಳಾಸ ಡಿ. ಮನ್ನಾಲಾಲ್ ಡೆಲ್ಲಿ ವೈದ್ಯರು
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

ಮುಸಲ್ಮಾನ ಆಳ್ವಿಕೆಯಲ್ಲಿ ಗೋವಧೆ ನಿಷೇಧ.

ಹಿಂದುಸ್ಥಾನದಲ್ಲಿ ಮುಸಲ್ಮಾನರು ಗೋವಧೆಯ ವಿಷಯದಲ್ಲಿ ಯಾವ ರೀತಿಯಾಗಿ ನಡಯುತ್ತಿದ್ದರು, ಮತ್ತು ಅನೇಕರು ಹಿಂದುಗಳ ಭಾವನೆಗಳನ್ನು ಎಷ್ಟರಮಟ್ಟಿಗೆ ಗೌರವಿಸುತ್ತಿದ್ದರು ಎಂಬ ಸಂಗತಿಗಳು ಪ್ರಾಯಶಃ ಏಂಡಮುಸಲ್ಮಾನರಿಬ್ಬರಿಗೂ ಚೆನ್ನಾಗಿ ಗೊತ್ತಿಲ್ಲ. ಈ ವಿಚಾರದಲ್ಲಿರುವ ಅಜ್ಞಾನವನ್ನು ಸ್ವಲ್ಪಮಟ್ಟಿಗೆ ನಿವಾರಿಸಬೇಕೆಂತಲೂ; ಮುಸಲ್ಮಾನರಿಗೆ ಅವರ ಪೂರ್ವಿಕರು ಈ ವಿಷಯದಲ್ಲಿ ಎಷ್ಟು ಧಾರಾಳ ಮನಸ್ಸಿನವರಿದ್ದು ದೇಶದಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿದ್ದಾಗ ಅವರು ಹಿಂದು ಧರ್ಮದ ಪರಧಾರ್ಮಿಕ ಭಾವನೆಗಳನ್ನು ಎಷ್ಟರಮಟ್ಟಿಗೆ ಗೌರವಿಸುತ್ತಿದ್ದರೆಂಬುದನ್ನು ತೋರಿಸಬೇಕೆಂಬುದಾಗಿದ್ದೇನೆ ನನ್ನ ಸೀಮಿತ ಬುದ್ಧಿಯಿಂದ ಇಷ್ಟು ಕಠಿಣವಾಗಿ ಪರಿಣಮಿಸಿರುವ ಈ ಪ್ರಶ್ನೆಯು ಅವರಿಗೆ ಸ್ವಲ್ಪವಾದರೂ ಕಷ್ಟದಾಯಕವಾಗಿರಲಿಲ್ಲ ಆಗ ಮುಸಲ್ಮಾನರೇ ದೇಶದ ದೊರೆಗಳಾಗಿದ್ದರು. ಅವರು ಇದನ್ನು ತಮ್ಮ ಧರ್ಮದ ಪ್ರಶ್ನೆಯನ್ನಾಗಿ ಮಾಡಿಕೊಂಡಿದ್ದಕ್ಕೆ ಅವರು ಹಿಂದುಗಳ ಧಾರ್ಮಿಕ ಭಾವನೆಗಳನ್ನು ಲಕ್ಷಿಸದೆ ತಿರಸ್ಕಾರದಿಂದ ಗಣಿಸಲು ಅವುಗೆ ಯಾವ ಪ್ರತಿಬಂಧಕವೂ ಇರಲಿಲ್ಲ. ಆದರೆ ಅವರು ಹಿಂದುಗಳನ್ನು ತಮ್ಮ ಗುಲಾಮರಂತೆ ಕಾಣದೆ, ತಮ್ಮ ದೇಶಬಾಂಧವರೆಂದು ತಿಳಿದು ಅವರನ್ನು ತಮ್ಮ ಸರಿಸಮಾನಿಕರಂತೆ ಕಾಣುತ್ತಿದ್ದರು. ಮಹಮ್ಮದೀಯ ದೊರೆಗಳು ಹಿಂದುಗಳ ಧಾರ್ಮಿಕಭಾವನೆ ಮತ್ತು ಆಚರಣೆಗಳನ್ನು ಗೌರವಿಸುತ್ತಿದ್ದರೆಂಬುದನ್ನೂ, ರಾಜ್ಯಾಡಳಿತದಲ್ಲಿ ಅವನ್ನು ಸಮಭಾಗಿಗಳಂತೆ ಕಾಣುತ್ತಿದ್ದರೆಂಬುದನ್ನೂ ಪೂರ್ಣವಾಗಿ ನನ್ನ ಹಿಂದು ಒಂದುಗಳು ಕೂಡ ಅರಿತುಕೊಳ್ಳಬೇಕು. ಮುಸಲ್ಮಾನರು ತಮ್ಮ ರಾಜ್ಯಭಾರದ ಕಾಲದಲ್ಲಿ ಹಿಂದುಗಳನ್ನು ಹೇಗೆ ಕಾಣುತ್ತಿದ್ದರು, ರಾಜ್ಯದ ಜವಾಬ್ದಾರಿ ಮತ್ತು ಹಕ್ಕುಗಳನ್ನು ವಹಿಸಿಕೊಳ್ಳಲು ಎಷ್ಟರಮಟ್ಟಿಗೆ ಅವಕಾಶವನ್ನು ಕೊಟ್ಟಿದ್ದರೆಂಬುದನ್ನು ತಿಳಿದುಕೊಳ್ಳುವುದು ಬಹು ಮುಖ್ಯವಾದ ಐತಿಹಾಸಿಕ ಸಂಗತಿಯಾಗಿದೆ.

—

ಗೋವಧೆಯ ಮೇಲಿನ ಕಂದಾಯ.

ಗೋವಧೆಯ ವಿಷಯದಲ್ಲಿ ಹಿಂದುಗಳ ಸೂಕ್ಷ್ಮ ಧಾರ್ಮಿಕ ಭಾವನೆಗಳಿಗೆ ಮುಸಲ್ಮಾನ ದೊರೆಗಳು ತೋರಿಸುತ್ತಿದ್ದ ಸಹಾನುಭೂತಿಯನ್ನು ತಿಳಿಯಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ. ಅವರ ರಾಜ್ಯಭಾರವು ಪ್ರಾರಂಭವಾದಂದಿನಿಂದಲೂ ಮಹಮ್ಮದೀಯರು ಈ ವಿಷಯದಲ್ಲಿ ಹಿಂದುಗಳಿಗಿರುವ ಭಾವನೆಗಳನ್ನು ತಿಳಿದುಕೊಂಡಿದ್ದರು ಮತ್ತು ಹಿಂದುಗಳನ್ನು ತಮ್ಮ ದೇಶಬಾಂಧವರಂತೆಯೂ, ಬಂಧುಗಳಂತೆಯೂ ಕಾಣುತ್ತ ರಾಜ್ಯವನ್ನಾಳಬೇಕೆಂಬುದು ಅವರ ಮುಖ್ಯ ಅಭಿಪ್ರಾಯವಾಗಿತ್ತಾದುದರಿಂದ ಅವರು ಗೋವಧೆಯ ವಿಷಯದಲ್ಲಿ ಹಿಂದುಗಳ ಧಾರ್ಮಿಕ ಭಾವನೆಗಳನ್ನು ಸಂಪೂರ್ಣವಾಗಿ ಗೌರವಿಸುತ್ತಿದ್ದರು. ಮುಸಲ್ಮಾನ ಆಳ್ವಿಕೆಯ ಆರಂಭದಿಂದಲೂ ಕಟ್ಟುಗಂಬಳೆ ಪ್ರತಿಯೊಂದು ಗೋವಧೆಗೋಸ್ಕರ ೧೦ ಬೆಳ್ಳಿಗಳನ್ನು ಕಂದು ಪ್ರತ್ಯೇಕವಾದ ಕಂದಾಯವು ಹಾಕಲ್ಪಟ್ಟಿದ್ದಿತು ಫಿರೋಜ್ ಷಹನ ಕಾಲದಲ್ಲಿ ಕಟ್ಟುಗರೆಲ್ಲರೂ ಈ ಕಂದಾಯದಮೇಲೆ ದೂರು ಹೇಳಿಕೊಳ್ಳಲು ರಾಜನು ಆ ಕಂದಾಯವನ್ನು ತೆಗೆದುಹಾಕಿದನು. ಈ ಕಂದಾಯದ ಸಮಗ್ರ ವೃತ್ತಾಂತವು ಜಾತ್ರೆಗಳಲ್ಲಿ ಕೂಡಲ್ಪಟ್ಟಿಲ್ಲ. ಆದರೆ ಅದು ಗೋವಧೆಯ ನಿವಾರಣೆಗೋಸ್ಕರವೇ ಆಗಿದ್ದಿರಬೇಕು. ಅದು ದರಿಂದ ಈ ಕಂದಾಯವು ಮುಸಲ್ಮಾನ ರಾಜ್ಯ ಸ್ಥಾಪನೆಯಾದಾಗಿನಿಂದ ಫಿರೋಜ್ ಷಹ ತೊಗಲಕನ ಕಾಲದವರೆಗೂ ಎಂದರೆ ೩೦೦ ವರ್ಷಗಳವರೆಗಿದ್ದಿತು. ಗೋವಧೆಯ ನಿಷೇಧವನ್ನು ಒಂದು ಸರ್ವಸಾಮಾನ್ಯವಾದ ಪ್ರಸಿದ್ಧಪತ್ರಿಕೆಯ ಮೂಲಕ ತಿಳಿಯಪಡಿಸುವುದರ ಬದಲಾಗಿ ಮುಸಲ್ಮಾನ ಧೊರೆಗಳು ಈ ಕಂದಾಯದ ಪದ್ಧತಿಯನ್ನನುಸರಿಸಿದರು. ಈ ಕಂದಾಯಕ್ಕೆ ಜಜ್ಜುರಿಯೆಂದು ಹೆಸರುದ್ದಿತು. ಮಹಮ್ಮದ್ ಷಹ ತೊಗಲಕನ ಕಾಲದಲ್ಲಿ ಅರಮನೆಯ ಪಾಕಶಾಲೆಗಳ ವೃತ್ತಾಂತಗಳನ್ನು ವಿಸ್ತಾರವಾಗಿ ವಿವರಿಸುವರು ಆದರೆ ಅವುಗಳಾವುದರಲ್ಲಿಯೂ ಗೋವಧೆಯು ಹೇಳಲ್ಪಟ್ಟೇ ಇಲ್ಲ. ಫರ್ಹತಲ್ ಮುಲ್ಕನು ಗುಜರಾತು ಪ್ರಾಂತ್ಯದ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟಿದ್ದನು ಅನಂತರ ಪಟ್ಟವನ್ನೇರಿದ ಮಹಮದ್ ಘಯಾಸುದ್ದೀನ್ ತೊಗಲಕನ ಕಾಲದಲ್ಲಿಯೂ ಅತನೇ ಗುಜರಾತು ಪ್ರಾಂತ್ಯಕ್ಕೆ ಮುಖ್ಯಾಧಿಕಾರಿಯಾಗಿದ್ದನು. ಈ ಫರ್ಹತಲ್ ಮುಲ್ಕನು ಹಿಂದೂಗಳಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದನೆಂತಲೂ, ಗೋವಧೆಗೆ ಅವಕಾಶ ಕೊಡಲಿಲ್ಲವೆಂತಲೂ ಚರಿತ್ರಕಾರರು ತಿಳಿಸಿದ್ದಾರೆ. ಹಿಂದುಗಳ ಸುಲಭ್ಯ ಸಾಸಿರುದ್ದಿನ್ ಮುಬ್ಬಾನಕ ಆಡಳಿತದ ಕಾಲದಲ್ಲಿ ವಿಶೇಷವಾದ ಆದರ ಗೌರವಗಳಿಗೆ ಪಾತ್ರರಾಗಿದ್ದರು. ಈ ದೊರೆಯು ಗೋವಧೆಯನ್ನು ತನ್ನ ರಾಜ್ಯದಲ್ಲಿ ಸಂಪೂರ್ಣವಾಗಿ ನಿಲ್ಲಿಸಿದ್ದನು. ಫಿರೋಜ್ ಷಹನ ಕಾಲದಲ್ಲಿ ಹಾಕಲ್ಪಟ್ಟಿದ್ದ ಈ ಜಜ್ಜುರಿ ಕಂದಾಯವು ಪುನಃ ಅತನ ಆಳ್ವಿಕೆಯ ನಂತರ ಹಾಕಲ್ಪಟ್ಟಿತೆಂದು ತೋರುತ್ತದೆ ಸಂಭವಿಸಿದರೆ, ಅಕ್ಬರನು ಈ ಕಂದಾಯವನ್ನು ತೆಗೆದುಹಾಕಿದನೆಂದು ಜಾತ್ರೆಗಳಿಂದ ಗೊತ್ತಾಗುತ್ತದೆ. ಅಕ್ಬರನು ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಅಪ್ಪಣೆಮಾಡಿದನು. ಮತ್ತು ಈ ಕಂದಾಯವು ಆ ಮೇಲೆ ಅಗತ್ಯವಾಗಿ ಕಂಡುಬರಲಿಲ್ಲ, ಆದಕಾರಣ ಅದು ತೆಗೆದುಹಾಕಲ್ಪಟ್ಟಂಬಹುದು.

—

ಒಬ್ಬ ಯೂರೋಪಿಯನ್ ಪ್ರಯಾಣಿಕನ ಅಭಿಪ್ರಾಯ.

ಹದಿನೇಳನೆಯ ಶತಮಾನದಲ್ಲಿ ಹಿಂದುದೇಶಕ್ಕೆ ಬಂದಂಥ ಒಬ್ಬ ಆಂಗ್ಲೇಯ ಪ್ರಯಾಣಿಕನು, ಹಿಂದುಗಳಿಗೆ ಗೋವುಗಳಮೇಲೆ ವಿಶೇಷವಾದ ಭಕ್ತಿ ಇದ್ದಿತೆಂತಲೂ, ಗೋವಧೆಯು ಕೂಡ ಮನುಷ್ಯವಧೆಯಷ್ಟೇ ಪಾಪಕೃತ್ಯವೆಂದು ಗಣಿಸಲ್ಪಟ್ಟಿದ್ದಿತೆಂತಲೂ ಬರೆದಿರುವನು. ಇದರಿಂದ ಮುಸಲ್ಮಾನ ದೊರೆಗಳು ಈ ವಿಷಯದಲ್ಲಿ ಹಿಂದುಗಳ ಭಾವನೆಗಳನ್ನು ತಿರಸ್ಕರಿಸಲು ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಮತ್ತು ಒಬ್ಬ ಸಾಮಾನ್ಯ ಪ್ರಯಾಣಿಕನು ಕೂಡ ಹಿಂದುಗಳ ಭಾವನೆಗಳನ್ನು ಸುಲಭವಾಗಿ ತಿಳಿದುಕೊಳ್ಳುವಷ್ಟರಮಟ್ಟಿಗೆ ಅವರ ಧಾರ್ಮಿಕ ಭಾವನೆಗಳು ಗೌರವಿಸಲ್ಪಟ್ಟಿದ್ದವು ಹಿಂದುಗಳು ಗೋವಧೆಯನ್ನು ನಿಲ್ಲಿಸುವಂತೆ ಜನರಿಗೆ ಬೋಧಿಸಲಿಕ್ಕೆ ಯಾವ ಪ್ರತಿಬಂಧಕವೂ ಇರಲಿಲ್ಲ. ಇದು ರಾಜ್ಯಭಾರ ಮಾಡುತ್ತಿದ್ದವರ ಮನೋಭಾವಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

—

ಬಾಬರನು ತನ್ನ ಮಗನಾದ ಹುಮಾಯೂನನಿಗೆ ಗೋಹತ್ಯೆಯ ಬಗ್ಗೆ ಬರೆದ ಒಡ್ಡಿವಾದ.

—

ಬಾಬರನು ಹಿಂದುಸ್ಥಾನದಲ್ಲಿ ಮೊಗಲರಾಜ್ಯ ಸ್ಥಾಪನೆಯನ್ನು ಮಾಡಿ, ಪಟ್ಟವನ್ನೇರಿದಾಗ ಅತನು ರಾಜ್ಯವಾಳಿದ ಬಹು ಸ್ವಲ್ಪ ಕಾಲದಲ್ಲಿ ಹಿಂದುಗಳಿಗೆ ಈ ವಿಷಯದಲ್ಲಿದ್ದ ಅತ್ಯಂತ ಪೂಜ್ಯ ಭಾವನೆಗಳನ್ನು ತಿಳಿದುಕೊಂಡದ್ದು ಮಾತ್ರವಲ್ಲದೆ ತನ್ನ ಮಗನಾದ ಹುಮಾಯೂನನಿಗೆ ಅಂತರಂಗವಾಗಿ ಒಂದು ಉಯಿಲನ್ನು ಸಹ ಬರೆವನು. ಅದಂಲ್ಲಿ ಅತನು ಹಿಂದುಗಳ ಧಾರ್ಮಿಕ ನಡತೆಗಳನ್ನು ತಿಳಿಸಿ, ಗೋವಧೆಯನ್ನು ನಿಲ್ಲಿಸಬೇಕೆಂದು ಬರೆದಿದ್ದನು. ಇದರ ಮೂಲಪ್ರತಿಯು ಭೂಪಾಲ ಸಂಸ್ಥಾನದ ವುಸ್ತಕಭಂಡಾರದಲ್ಲಿ ಕಾದಿಡಲ್ಪಟ್ಟಿದೆ. ಮತ್ತು ಅದರ ಭಾವಚಿತ್ರವು ನವಾಬ್ ಕರ್ನಲ್ ಹಮೀದುಲ್ಲಾ ಖಾನ್ ಸಾಹೇಬರ ಕೃಪೆಯಿಂದ ದೊರೆತಿದೆ. ಆ ಪತ್ರದ ಭಾವಾಂತರವು ಈ ಕೆಳಗಿರುವ ರೀತಿಯಲ್ಲಿದೆ—

ಪ್ರಿಯ ಪುತ್ರನೇ!

ಭಿನ್ನ ಭಿನ್ನ ಧರ್ಮಗಳ ಜನರು ಹಿಂದೂಸ್ಥಾನದಲ್ಲಿ ವಾಸವಾಗಿದ್ದಾರೆ. ರಾಜಾಧಿರಾಜನು ದೇಶದ ರಾಜ್ಯಭಾರವನ್ನು ನಿನಗೆ ವಹಿಸಿಕೊಟ್ಟುದುದಕ್ಕೋಸ್ಕರ ನೀನು ದೇವರಿಗೆ ವಂದನೆಗಳನ್ನು ಸಮರ್ಪಿಸಬೇಕಾಗಿದೆ. ಆದುದರಿಂದ ನೀನು ಈ ನಿಯಮಗಳಂತೆ ನಡಯುವುದು ಯುಕ್ತ.

೧. ಧಾರ್ಮಿಕ ದ್ವೇಷಾಸೂಯೆಗಳು ನಿನ್ನ ಮನಸ್ಸನ್ನು ಸ್ವಾಧೀನಮಾಡಿಕೊಳ್ಳಲು ಅವಕಾಶ ಕೊಡಬೇಡ. ಎಲ್ಲಾ ಮತೀಯರ ಧಾರ್ಮಿಕ ಭಾವನೆ ಮತ್ತು ಆಚರಣೆಗಳಿಗೆ ಗಮನಿಸಿ ನಿಷ್ಪಕ್ಷಪಾತವಾದ ನ್ಯಾಯದಿಂದ ನಡೆ.

೨. ಮುಖ್ಯವಾಗಿ ಗೋವಧೆಗೆ ಅವಕಾಶವನ್ನು ಕೊಡಬೇಡ. ಇದರಿಂದ ಹಿಂದುಸ್ಥಾನದ ಜನರು ನಿನ್ನನ್ನನುಸರಿಸಿ ನಡೆಯುವರು. ಈ ರೀತಿ ಮಾಡುವುದರಿಂದ ಈ ದೇಶದ ಜನರು ನಿನಗೆ ತುಂಬಾ ಕೃತಜ್ಞರಾಗಿರುವರು.

೩. ರಾಜ ಪ್ರಜೆಗಳ ಸಂಬಂಧವು ಪ್ರೇಮ ಯುಕ್ತವಾಗಿರುವುದಕ್ಕೋಸ್ಕರ ದೇಶದಲ್ಲಿ ಸ್ಥಾಪಿಸಬೇಕಾದ ಸಂವಿಧಾನಗಳು ನೆಲೆಗೊಳ್ಳುವುದಕ್ಕೋಸ್ಕರ ನೀನು ಎಂದೂ ಯಾವ ಮತದವರ ಪೂಜಾಸ್ಥಾನಗಳನ್ನೂ ನಾಶಮಾಡಕೂಡದು ಮತ್ತು ಸದಾ ನ್ಯಾಯಪ್ರಿಯನಾಗಿರಬೇಕು.

೪. ಇಸ್ಲಾಮಿನ ಮತವು ದೌರ್ಜನ್ಯದ ಶಸ್ತ್ರಕ್ಕಿಂತಲೂ ಪ್ರೇಮ ಕೃತಜ್ಞತೆಗಳೆಂಬ ಶಸ್ತ್ರಗಳಿಂದ ಜೀವನಾಗಿ ಮತ್ತು ವಿಶೇಷವಾಗಿ ಪ್ರಚಾರನಾಗುತ್ತದೆ.

೫. ಹಿಂದೂ ಮತ್ತು ನಿನ್ನ ಇವರ ಪರಸ್ಪರ ಭೇದಗಳನ್ನು ಎಂದಿಗೂ ಲಕ್ಷ್ಯಕ್ಕೆ ತರಬೇಡ, ಹಾಗೆ ನೀನು ತಂದಾದ್ದಾದರೆ ಅವು ಇಸ್ಲಾಮಿನ ಅನಸತಿಗೆ ಕಾರಣವಾಗುವವು.

೬ ಜನಾಂಗವು ದುಷ್ಪಾಣಾಪಾಯಗಳಿಂದ ಮುಕ್ತವಾಗಿರುವುದಕ್ಕೋಸ್ಕರ ನೀನು ನಿನ್ನ ಪ್ರಜೆಗಳ ಬೇರೆಬೇರೆ ನೈಪುಣ್ಯಗಳನ್ನು ಬಂದು ಸಂವತ್ಸರದ ಬೇರೆ ಬೇರೆ ಋತುಗಳಂತೆ ಭಾವಿಸು

—

ಅನಂತರದ ದೊರೆಗಳು.

—

ಬಾಬರನು ಹಿಂದುಸ್ಥಾನದ ನಿವಾಸಿಗಲ್ಲ. ಈ ದೇಶಕ್ಕೆ ಜಯಶೀಲನಾಗಿ ಬಂದನು. ಆದರೂ ಹಿಂದುಗಳ ನಿಂಗಡ ಪ್ರೇಮ ಗೌರವಯುಕ್ತವಾ ಸಂಬಂಧವನ್ನು ನೆಲೆಗೊಳಿಸಿ, ಅದನ್ನು ಭವಿಷ್ಯ ಪಡಿಸಿ ತನ್ನೊಲಕ ತನ್ನ ರಾಜ್ಯಸ್ಥಾಪನೆಯು ಮಾಡಬೇಕೆಂಬುದು ಅತನ ಉದ್ದೇಶವಾಗಿ ದ್ದಿತು. ಸರದೇಶದ ಮಹಮ್ಮದೀಯ ಜಯಶೀ ಲನೇ ಗೋವಧೆಯ ವಿಷಯದಲ್ಲಿ ಹಿಂದುಗಳ ಭಾವನೆಗಳಿಗೆ ಇಷ್ಟು ಗೌರವ ಕೊಟ್ಟಾಗ ಹಿಂ ದೂದೇಶವನ್ನೇ ತನ್ನ ಮನೆಯನ್ನಾಗಿ ಮಾಡಿ ಕೊಂಡು ಇದೇ ದೇಶದಲ್ಲಿ ಹುಟ್ಟಿ ಬೆಳೆದು ಅನಂ ತರ ರಾಜ್ಯವನ್ನಾಳಿದ ಮುಸಲ್ಮಾನ್ ದೊರೆಗಳು ಮತ್ತು ಹಿಂದು ರಕ್ತದಿಂದಲೇ ಜನಿಸಿದ ಕೆಲವರ ನಡತೆಯನ್ನು ತಿಳಿದುಕೊಳ್ಳುವುದೇನೂ ಕಷ್ಟವಲ್ಲ ಹಿಂದುಗಳ ಧಾರ್ಮಿಕ ಭಾವನೆಗಳಿಗೆ ಅವರ ಗೌರವವು ಎಷ್ಟು ವಿಶೇಷವಾಗಿದ್ದಿತೆಂಬುದನ್ನು ಊಹಿಸಬಹುದು.

—

ಅಕ್ಬರ್.

—

ತನ್ನ ವಿಸ್ತಾರವಾದ ರಾಜ್ಯದಲ್ಲಿ ಧೆಯನ್ನು ಸಂಪೂರ್ಣವಾಗಿ ನಿಲ್ಲಿಸು ಣೆಮಾಡಿದನು. ಏನ್-ಇ-ಅಕ್ಬರಿ ಪುಸ್ತಕಗಳಲ್ಲಿ ಇದರ ವಿಸ್ತಾರ ವೃತ್ತಾಂತವು ಕೊಡಲ್ಪಟ್ಟಿದೆ. ಅವನ ಹಿಂದಿನ ದೊರೆಗಳ ಕಾಲದಲ್ಲಿ ಈ ವಿ ಷಯವು ನಿಯಮಬದ್ಧವಾಗಿ ಆಚರಣೆಯಲ್ಲಿ ಲ್ಲವೆಂದು ನಂಬಲಾಸ್ಪದವಿದ್ದರೂ ಹಾಕಲ್ಪಟ್ಟಿರಲಿಲ್ಲ. ಆಚರಣೆಯಲ್ಲಿ ಜಹಾಂಗೀರನು ಈ ಆಜ್ಞೆಗಳನ್ನು ತೆಗೆದು ಬಿದ್ದು ಮಾಕ್ರವಲ್ಲದೆ, ಅಕ್ಬರನು ಆದಿ ಜನ್ಮವೆತ್ತಿದ್ದರಿಂದ ಎಲ್ಲಾ ಅದಿಕ್ಯವಾ ರಿಗಳಲ್ಲಿಯೂ, ತಾನು ಗುರುವಾರ ಹುಟ್ಟಿಬಿಟ್ಟು ದ್ದಾನಾದುದರಿಂದ ಎಲ್ಲಾ ಗುರುವಾರಗಳಲ್ಲಿಯೂ ಯಾವ ಪ್ರಾಣಿಯನ್ನೂ ಕೊಲ್ಲಕೂಡದೆಂತಲೂ ಆ ದಿವಸಗಳಲ್ಲಿ ಬೇಟೆಯನ್ನು ಸಹ ಆಡಕೂಡ ದೆಂತಲೂ ಅಪ್ಪಣೆಮಾಡಿದ್ದನು.

—

ಉಪಸಂಹಾರ.

—

ಈ ರೀತಿಯಲ್ಲಿ ಮುಸಲ್ಮಾನ್ ದೊರೆಗಳು ಈ ದೇಶದಲ್ಲಿ ಗೋವಧೆಯನ್ನು ನಿಲ್ಲಿಸಿ ಪ್ರಯತ್ನಿಸಿದನು. ಆ ಕಾಲಗಳ ಚರಿತ್ರೆಯನ್ನು ಓದಿದರೆ ಮುಸಲ್ಮಾನ್ ದೊರೆಗಳು ಹಿಂದೂಗಳಿಗೆ ಬಹಳ ತೊಂದರೆಗಳನ್ನು ಕೊಡುತ್ತಿದ್ದರೆಂದು ಅನೇಕ ಹಿಂದುಗಳು ದೂರುವರು. ಆದರೆ ಸಾವಧಾನ ವಾಗಿಯೂ ನಿಷ್ಪಕ್ಷಪಾತವಾಗಿಯೂ ಚರಿತ್ರೆಯ ನ್ನು ಓದಿದರೆ ಅವರ ಅಭಿಪ್ರಾಯವು ತಪ್ಪೆಂದು ಸಿದ್ಧವಾಗುವದು. ಈ ಗೋವಧೆಯ ವಿಷಯ ದಲ್ಲಿ ಮಾತ್ರವಲ್ಲದೆ ಹಿಂದೂಗಳ ಸುಖದುಃಖ ಗಳಲ್ಲಿಯೂ ಮುಸಲ್ಮಾನ್ ದೊರೆಗಳು ಭಾಗಿಗಳಾ ಗುತ್ತಿದ್ದರು. ಮತ್ತು ಅವರ ಹಬ್ಬಹುಣುಮೆ ಗಳನ್ನೆಲ್ಲಾ ಆಚರಿಸುತ್ತಿದ್ದರು. ದೀಪಾವಳಿಯ ಉತ್ಸವದ ದಿವಸ ಪೂಜೆಗೋಸ್ಕರ ರತ್ನಖಚಿತೆಯೊಂ ದು ಸೇರುವಿದ್ದಿತು ಬ್ರಾಹ್ಮಣರು ರಾಜೋ ದ್ಯಾನಗಳಿಗೆ ಪುಷ್ಪಗಳನ್ನು ತೆಗೆದುಕೊಂಡು ಬಂದು ರಾಜನಿಂದ ಬಹುಮಾನಗಳನ್ನು ಹೊಂದು ತ್ತಿದ್ದರು. ನವರಾತ್ರಿಯು ರಾಜನಿಂದಲೂ ಆಚ ರಿಸಲ್ಪಡುತ್ತಿದ್ದಿತು. ಶಿವರಾತ್ರಿಯಲ್ಲಿ ಯೋ ಗಿಗಳಿಗೆ ಅರಮನೆಯಿಂದ ಭೋಜನವನ್ನು ಕೊಟ್ಟು ಊಟೋಪಚಾರಗಳನ್ನು ಮಾಡಿಸುತ್ತಿದ್ದರು. ಸೂ ರ್ಯೋಪರಾಗಕಾಲದಲ್ಲಿ ಸ್ವತಃ ರಾಜನೇ ಕೈಯಲ್ಲಿ ರಂಖ್ಯಯನ್ನು ಧರಿಸುತ್ತಿದ್ದನು. ಮುಸಲ್ಮಾನ್ ದೊರೆಗಳು ಯಾವ ಸಂಕೋಚವನ್ನೂ ಹೊಂದದೆ ಹಿಂದು ಯೋಗಿಗಳ ದರ್ಶನಕ್ಕೆ ಹೋಗಿ ಅವರ ಸಂಗಡ ಸ್ನೇಹಭಾವದಿಂದ ಸಂಭಾಷಣೆಮಾಡುತ್ತಿ ದ್ದರು

ಪ್ರಾಣಿದಯಾ ಜ್ಞಾನ

ಪ್ರಸಾಗಕ ಸಂಪುಟ ೬ ನೇ ಪುಷ್ಪವು.

ವೃತ್ತಾಂತಸಂಗ್ರಹ

—

ಸರ್ಕಾರಿ ನೌಕರರಲ್ಲದ ಪ್ರಜೆಗಳಿಗೆ ಅಧಿಕಾರಿಗಳು ಬರೆಯುವ ಏಲ್ಲಾ ವಿಧವಾದ ಕನ್ನಡ ವ್ಯವಹಾರಗಳಲ್ಲಿಯೂ "ನೀವು ನಿಮ್ಮ" ಮುಂತಾದ ಗೌರವಾರ್ಥವಾದ ಬಹುವಚನ ಶಬ್ದಗಳನ್ನು ಉಪಯೋಗಿಸಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುವೆವು.

—

ಬೆಂಗಳೂರು ಮುನಿಸಿಪಲ್ ಖೂನಿ ಮೊಖದ್ದ ಮೆಯಲ್ಲಿ ಅಪರಾಧಿಯನ್ನು ಪತ್ತೆಮಾಡಿಕೊಟ್ಟ ಶ್ಯಾಮಣ್ಣನೆಂಬ ಪೊಲೀಸಾರಕನಿಗೆ ಸರ್ಕಾರಿ ಗೆಜೆಟ್‌ನಲ್ಲಿ ಕಳೆದ ವರ್ಷದ ಜನವರಿಯಲ್ಲಿ ಪ್ರಕಟವಾಗಿದ್ದಂತೆ ೧೦೦೦ ರೂಪಾಯಿಗಳ ಬಹುಮಾನವನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುವರು.

ಸಹರ ಎಂಬುದು ಸಾವಿರಾರು ಮೈಲಿಗಳ ಅಗಲಕ್ಕೂ ಉದ್ದಕ್ಕೂ ಹರಡಿರುವ ಚನ್ನಾಗಿ ತರುಗಳಿಲ್ಲದ ಮರಳುಭೂಮಿಯಾಗಿದೆ. ಇದರ ರೂಪವಾಗಿ ಅಲ್ಲಲ್ಲಿ ಹಳ್ಳವಾದ ಪ್ರದೇಶಗಳಲ್ಲಿ ನೀರು ಸಿಗುವುದು. ಕೆಲವು ಕಡೆ ಮರಳನ್ನು ಆಳವಾಗಿ ತೋಡಿದರೆ ಅಲ್ಲಿ ನೀರು ಬರುವದೆಂದೂ, ಅದರಲ್ಲಿ ಮೀನುಗಳು ಸಿಗುವದೆಂದೂ ಈಗ ಕಂಡುಬಂದಿದೆ. ಮೀನುಗಳು ಅಲ್ಲಿಗೆ ಹೇಗೆ ಬಂದವೆಂಬುದನ್ನು ಈಗ ಶಾಸ್ತ್ರಜ್ಞರು ಪರೀಕ್ಷಿಸುತ್ತಲಿರುವರು.

—

ಇಂಗ್ಲೆಂಡಿನ ಕೀಲಿ ಎಂಬ ಗ್ರಾಮದಲ್ಲಿರುವ ಒಂದು ಯಂತ್ರಾಲಯದಲ್ಲಿ ಒಬ್ಬ ಕೂಲಿ ಹುಡಗಿ ಇರುವಳು. ಈಕೆಯು ನೂಲು ತೆಗೆಯುವ ಯಂತ್ರದಬಳಿ ಹೋಗುತ್ತಲೇ ಯಂತ್ರದ ಜಲಸೆಯು ಸ್ವಯಕೃತ್ಯವಾಗಿ ದಾರವು ಕಿತ್ತುಹೋಗುತ್ತಿತ್ತು. ಈಕೆಯನ್ನು ಡಾಕ್ಟರುಗಳು ಪರೀಕ್ಷಿಸಿನೋಡಿ ಈಕೆಯಲ್ಲಿ ವಿದ್ಯುಚ್ಛಕ್ತಿಯು ಅಧಿಕವಾಗಿ ಸಂಚಯವಾಗಿರುವುದೆಂತಲೂ, ಅದರಿಂದ ಯಂತ್ರಜಲಸೆಯಲ್ಲಿ ತೊಂದರೆಯುಂಟಾಗುತ್ತಿರುವುದೆಂತಲೂ ನಿರ್ಧರಿಸಿರುವರು.

—

ಮಧುರಾ ಕ್ಷೇತ್ರದಲ್ಲಿ ಕೋತಿಗಳ ಬಾವಳಿ ಬಹಳವಾದುದರಿಂದ ಅಲ್ಲಿನ ಮುನಿಸಿಪಾಲಿಟಿಯವರು ೫೦೦-೬೦೦ ಕೋತಿಗಳನ್ನು ಹಿಡಿಸಿ, ಒಂದು ಗೂಡ್ಸ್ ಗಾಡಿಯಲ್ಲಿ ಭರ್ತಿಮಾಡಿ ಕಾಂತಿ ಮುರ್ವಾರ ಎಂಬ ಸ್ಟೇಷನ್‌ಗೆ ರವಾನಿಸಿದರು. ಹಾಗೆಂತೆ ಇತರ ಕೆಲವು ಸ್ಟೇಷನ್‌ಗಳಿಗೆ ರವಾನಿಯಾಗಿರುವವೆಂದು ನಿರ್ಧಾರವಾಗಿದೆ. ಕಾಂತಿ ಮುರ್ವಾರದ ಮುನಿಸಿಪಾಲಿಟಿಯವರು ಈ ಮಂಗಗಳಿಂದ ಉಂಟಾಗಿರುವ ನಷ್ಟಕ್ಕೆ ಮಧುರಾ ಮುನಿಸಿಪಾಲಿಟಿಯ ಮೇಲೆ ದಾವಾ ಮಾಡುವವರಾಗಿದ್ದಾರೆ. ಹಿಂದೆ ಒಂದಾವರ್ತಿ ವಿಲಾಸ ಪುರದಲ್ಲಿ ನಾಯಿಗಳು ಹೆಚ್ಚಾಗಿದ್ದುದರಿಂದ, ಅವುಗಳನ್ನು ಒಂದು ವ್ಯಾಗನ್‌ನಲ್ಲಿ ತುಂಬಿ ಕಾಂತಿಮುರ್ವಾರಕ್ಕೆ ಕಳುಹಿಸಿದ್ದರಂತೆ!

—

ಮುಲ್ತಾನಿನ ಸೈನ್ಯದ ಟ್ರೆಜರಿಯಿಂದ ೫೦೦೦ ರೂಪಾಯಿಗಳನ್ನು ಕದ್ದುದಕ್ಕಾಗಿ ಇಬ್ಬರು ಸೋಲ್ಜರರು ಅಪರಾದಿತರಾಗಿರುವರು. ಇವರನ್ನು ಬಂಧನದಲ್ಲಿಟ್ಟಾಗ ೧೬೦೦ ರೂಪಾಯಿಗಳು ಸಿಕ್ಕಿದುವು.

—

ಸೊಲ್ಟ್ಲಾವುಕದಲ್ಲಿ ಏಕಶೈವ ಪುರಾಣದ ಚಿತ್ರಪಟಗಳನ್ನು ಮಾಡಲು (ಸಿನಿಮಾ) ಒಂದು ಲಕ್ಷ ರೂಪಾಯಿ ಬಂಡವಾಳದ ಹಿಂದು ಕಂಪೆನಿ ತಯಾರಿಸುವರು.

—

ಆಂಧ್ರರ ಖಾದೀನಲ್ಲಿ ವಿವಿಧ ಒಂದು ಲಕ್ಷ ಮೊಳ ನೂಲನ್ನು ಖಾದೀಮಂಡಲಕ್ಕೆ ಕಳುಹಿಸಲು ಬಿಲ್ಲನ ವಿದ್ಯಾರ್ಥಿಗಳ ಪ್ರಯತ್ನವು.

—

ಬರ್ಮಾದಲ್ಲಿ ೫೧ ಭಿಕ್ಷು (ಬುದ್ಧಮತದ ಸನ್ಯಾಸಿ) ಗಳನ್ನು ಸೆರೆಮನೆಯಲ್ಲಿಟ್ಟಿದ್ದಾರೆ. ಇವರಲ್ಲಿ ೬ ಮಂದಿ ಉಪವಾಸಮಾಡುತ್ತಿದ್ದಾರೆ.

'ಸತ್ಯವಾದಿ'

—೦—

ಗುರುವಾರ 29 ನೆ ಜನವರಿ 1925

ಮೈಸೂರು ಚೀಫ್ ಕೋರ್ಟ್.

ಚೀಫ್ ಕೋರ್ಟಿನ ಎಂಡನೆಯ ಜಡ್ಜಿಯವರಾದ ವ || ಸುಬ್ಬಣ್ಣನವರು ಜೂಲೈ ತಿಂಗಳಿಂದ ರಿಜಿಸ್ಟರಾಗಲು ಸರ್ಕಾರದ ಅನುಮತಿ ದೊರೆತಿರುವದೆಂದೂ, ಅವರು ಈಗಾಗಲೇ ರಜಾಕ್ಕೆ ಅರ್ಜಿ ಹಾಕಿಕೊಂಡಿರುವರೆಂದೂ ವರ್ತಮಾನವು ಪತ್ರಿಕೆಗಳಲ್ಲಿ ಪ್ರಕಟಿತವಾಗಲು ಪ್ರಾರಂಭವಾಗಿದೆ. ಈ ಸಂದರ್ಭದಲ್ಲಿ ಜನಗಳ ಮನಸ್ಸು ಆಗಲೇ ಮುಂದೆ ಚೀಫ್ ಕೋರ್ಟಿಗೆ ಇನ್ನೊಬ್ಬ ಜಡ್ಜಿಯವರು ಯಾರು ನಿಯಮಿಸಲ್ಪಡಬಹುದೆಂದು ಯೋಚನೆಯುಂಟಾಗಿರುವುದು. ಸದ್ಯಸ್ಥಿತಿಯಲ್ಲಿ ಮೈಸೂರು ಸರ್ಕಾರದಲ್ಲಿ ನೌಕರಿಯಲ್ಲಿರುವವರ ಪೈಕಿ, ಈ ಹುದ್ದೆಗೆ ಲಜಿಸ್ಲೇಟಿವ್ ಇಲಾಖೆಯ ಸೆಕ್ರೆಟರಿಯವರಾದ ಮ|| ನಾಗಪ್ಪನವರಿಗಾಗಲೀ ಅಥವಾ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಶ್ರೀನಿವಾಸಯ್ಯಂಗಾರ್‌ರವರಿಗಾಗಲೀ ಒದಗುವ ಸಂಭವವಿದೆ. ಹೊರದೇಶದಿಂದ ಇನ್ಯಾರಾದರೂ ಬರಬಹುದೆಂದು ನಂಬಲು ಅಷ್ಟು ಸಾಧ್ಯವಿಲ್ಲ. ಯಾತಕ್ಕೆಂದರೆ, ಈಗ ಆ ಪದವಿಗೆ ಅರ್ಹರಾದ ನ್ಯಾಯಮೀಮಾರ್ಕರಿಲ್ಲದಿದ್ದಲ್ಲಿ ಹಾಗೆ ಮಾಡಬೇಕಾಗಿತ್ತು.

ಮೇಲ್ಕಂಡ ಇಬ್ಬರ ಪೈಕಿ, ಯಾರು ಅರ್ಹರೆಂಬ ವಿಷಯದಲ್ಲಿ ಸ್ವಲ್ಪ ಯೋಚಿಸೋಣ. ವ || ನಾಗಪ್ಪನವರೇನೇ ಒಕ್ಕಲಿಗರ ಪತ್ರಿಕೆ ಅಭಿಪ್ರಾಯದಂತೆ ಅರ್ಹರೇ, ವಿದ್ವಾಂಸರೆ, ಠಂಬ ಅನುಭವಶಾಲಿಗಳೇ, ಚೀಫ್‌ಕೋರ್ಟ್ ಜಡ್ಜಿಯವರಾಗಿ ಕೆಲಕಾಲ ಇದ್ದವರೇ. ಆದರೆ ಈಚೆಗೆ ಖಾಲಿಯಾದ ಸಮಯದಲ್ಲಿ ಶ್ರೀಮನ್ಮಹಾರಾಜರೂ ಸರ್ಕಾರದವರೂ ಅವರಿಗೆ ಕೊಡದೆ ಬೇರೆಯವರನ್ನು ನೇಮಿಸಿರುವಾಗ, ಈಗ ಇನ್ನು ಅವರಿಗೆ ಕೊಡುವುದು ಅಷ್ಟು ಜೆನ್ನಾಗಿ ಕಾಣುವುದಿಲ್ಲ. ಮತ್ತು ಆಗಲಾರದೆಂದೇ ಊಹಿಸಬಹುದು.

ಆದ್ದರಿಂದ ಮುಂದೆ ಈ ಪದವಿಗೆ ಮ|| ಶ್ರೀನಿವಾಸಯ್ಯಂಗಾರವರೇ ನೇಮಿಸಲ್ಪಡಬಹುದೆಂಬ ಭರವಸೆ ಇದೆ. ಇವರೂ ತುಂಬಾ ವಿದ್ವಾಂಸರು. ನ್ಯಾಯವಿಮರ್ಶೆಯನ್ನು ತುಂಬಾ ಬುದ್ಧಿವಂತಿಕೆಯಿಂದ ಮಾಡುತ್ತಾರೆ. ತುಂಬಾ ಅನುಭವಸ್ಥರು. ಇವರು ಚೀಫ್ ಕೋರ್ಟಿಗೆ ಬಂದರೆ, ಕಕ್ಷಿಗಾರರಿಗೆ ನ್ಯಾಯ ಸಂಪೂರ್ಣ ದೊರೆಯುವುದರಲ್ಲಿ ಸಂಶಯವಿಲ್ಲ. ಇವರು ನೇಮಿಸಲ್ಪಟ್ಟಲ್ಲಿ ಪ್ರಜೆಗಳಿಗೆ ತುಂಬಾ ಸಂತೋಷ.

ತಿರುವಾಂಕೂರು ಮಹಾರಾಣಿಯವರು ಅಲ್ಲಿಯ ಹಿಂದೂ ದೇವಾಲಯಗಳಲ್ಲಿ ಪಾಶ್ಚಾತ್ಯರ ಬಲಿಯನ್ನು ಇನ್ನು ಮುಂದೆ ಮಾಡಕೂಡದೆಂದು ಆಜ್ಞಾಪಿಸಿರುತ್ತಾರೆ.

ವೃತ್ತಾಂತಸಂಗ್ರಹ

—

ಬೊಂಬಾಯಿ ಆಧಿಪತ್ಯದಲ್ಲಿ ರೈತರಿಗೆ ಕಾಡಿನ ಸಂಬಂಧದ ಅನಾನುಕೂಲಗಳನ್ನು ವಿಚಾರಿಸಲು ಒಂದು ಕಮಿಟಿಯನ್ನು ಅಲ್ಲಿ ಸರ್ಕಾರದವರು ನೇಮಿಸಿರುತ್ತಾರೆ.

—

ಬೊಂಬಾಯಿನ ಕೂಲಿಗಾರರ ಅನುಕೂಲ್ಯಗಳನ್ನು ನೋಡಿಕೊಳ್ಳಲು, ಮತ್ತು ಅವರಿಂದ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೂ, ಮುನಿಸಿಪಾಲಿಟಿಗಳಿಗೂ ಪ್ರತಿನಿಧಿಗಳನ್ನು ಕಳುಹಿಸಲೂ ಸಹಾಯಕವಾಗುವಂತೆ ಅಲ್ಲಿಯ ಮಿಲ್ಲಿನ ಜನರು ಸೇರಿ ಒಂದು ರಾಜಕೀಯ ಸಂಘ ಸ್ಥಾಪಿಸಲು ಏರ್ಪಡಿಸಿರುತ್ತಾರೆ.

—

ಭೂಪಾಲದ ಬೇಗಂರವರು ಅಲಿಘರ್ ವಿಶ್ವವಿದ್ಯಾಲಯಕ್ಕೆ 1 ಲಕ್ಷ ರೂಪಾಯಿಗಳನ್ನು ಅಲೀಘರ್ ವಿದ್ಯಾರ್ಥಿನಿಯರ ಪಾಠಶಾಲೆಗೆ 20 ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

—

ಗೌರ್ನರ್‌ಜನರಲ್ ಸಭೆಯವರು ಆಸ್ಪಾಎನ ಸತ್‌ಚಾ ಎಂಬ ಪುಸ್ತಕವು ರಾಜದ್ರೋಹಕರವಾದ ವಿಷಯಗಳಿಂದೊಡಗೂಡಿದೆಯೆಂದು ಪ್ರಕಸಲು ನಿಷೇಧಿಸಿರುವರು.

—

ದೇಶಬಂಧು ದಾಸರವರಿಗೆ ಸ್ವಲ್ಪ ಆರೋಗ್ಯವಾಗಿದೆ. ಸಂಪೂರ್ಣಾರೋಗ್ಯ ಸಂಪಾದಿಸುವ ಶನಕ, ಪಾಟ್ನಾದಲ್ಲಿ ಅವರ ತಮ್ಮ ಜಡ್ಜಿಯವರಾದ ದಾಸ್‌ರವರ ಜೊತೆಯಲ್ಲಿರುವರು.

—

ಬೊಂಬಾಯಿನ ಬಾನ್ಸ್ರಾ ಖೂನಿ ವಿಷಯದಲ್ಲಿ ಇಂಡೂನ 7 ಜನ ಅಧಿಕಾರಿಗಳು ದಸ್ತಗಿರಿ ಮಾಡಲ್ಪಟ್ಟಿರುವರು. ಮೊಖದ್ದಮೆ ಪ್ರಾರಂಭವಾಗಲು ಇನ್ನು 2 ತಿಂಗಳು ಬೇಕಾಗಿದೆಯೆಂದು ತಿಳಿಯಬಂದಿದೆ.

—

ಕರ್ನಾಟಕ ಪ್ರಾಂತಿಕ ರಾಷ್ಟ್ರೀಯ ಸಭೆಯ ಮಾಟಂಗು ಒರುವ ತಿಂಗಳು 1 ನೇ ತಾರೀಖಿನ ದಿವಸ ಮಂಗಳೂರಿನಲ್ಲಿ ನಡೆಯುತ್ತದೆ.

—

ನಮ್ಮ ದಿವಾನರಾದ ಮಿ || ಬ್ಯಾನರ್ಜಿಯವರು ರಜಾದಿಂದ ಪುನಃ ವಾಪಸ್ ಕೆಲಸಕ್ಕೆ ಬರುವಂತಿಲ್ಲವೆಂದೂ ಅವರ ಬದಲು ಮುಡಿಮ್ಯಾನ್ ರಿವ್ಯೂ ಬೋರ್ಡ್ ಮೆಂಬರಾದ ಮತ್ತು ಪೂರ್ಣಯ್ಯನವರ ವಂಶಕ್ಕೆ ಸೇರಿದ ಮ|| ರಾಮಚಂದ್ರ ರಾಯರೆಂಬವರು ದಿವಾನರಾಗುವರೆಂದು ಸ್ವರಾಜ್ಯ ಪತ್ರಿಕೆಯಲ್ಲಿ ಒಬ್ಬ ಬಾತ್ಮೀದಾರರು ಒದಿದ್ದರು. ಇದಕ್ಕೆ ಆಧಾರವಿಲ್ಲವೆಂದು ತಿಳಿಯಬಂದಿದೆ.

—

ಬೊಂಬಾಯಿನಲ್ಲಿ ಒಂದು ದೊಡ್ಡ ಎಣ್ಣೆ ಗಡಂಗಿಗೆ ಬೆಂಕಿ ಬಿದ್ದು 50 ಸಾವಿರ ರೂಪಾಯಿ ನಷ್ಟ !

—

ರಂಗೂನಿನಲ್ಲಿ ಒಬ್ಬನ ಹತ್ತಿರ 100 ರೂಪಾಯಿಗಳ 151 ಕೋಥಾ ನೋಟುಗಳು ಸಿಕ್ಕಿ ದಸ್ತಗಿರಿ ಮಾಡಿದ್ದಾರೆ.

ಯರವಾಡದ ಜೈಲಿನಲ್ಲಿ ತುಳಸೀಗಿಡವಿದ್ದದ್ದನ್ನು ತೆಗೆದುಹಾಕಲು, ಅಲ್ಲಿಯ ಅನೇಕ ಹಿಂದೂ ಖೈದಿಗಳಿಗೆ ತುಂಬಾ ಅಸಮಾಧಾನವುಂಟಾಯಿತು. ಆದರೆ ಜೈಲಿನ ಸೂಪರಿಂಟೆಂಡೆಂಟರು ಅದನ್ನು ತೆಗೆಯಲು ಕಾರಣ ತಿಳಿಸಲು, ಕೆಲವರು ಸಮಾಧಾನರಾದರು. ಆದರೆ ಇನ್ನು ಕೆಲವರು ಆ ಸಸಿ ಬೂಬಿನಿಂದ ಸಂತುಷ್ಟರಾಗದೆ, ತುಳಸೀಗಿಡ ಪುನಃ ಅಲ್ಲಿ ನೆಡುವತನಕ ಊಟಮಾಡಲು ತ್ಯಜಿಸಿದರು. ಈಗ ಗಿಡವು ನೆಡಲ್ಪಟ್ಟಿದೆ. ಎಲ್ಲಾ ಸಮಾಧಾನ ಸ್ಥಿತಿಗೆ ಬಂದಿದೆ.

—

ಸುಮಾರು 1 ವಾರದ ಹಿಂದೆ ಕಲ್ಕತ್ತಾದ ಎಲಿಯಟ್ ರಸ್ತೆಯಲ್ಲಿ ಲಾರ್ಡ್ ವಯ 28 ವರ್ಷ ಸ್ಪಾನ ಪರಂಗಿಯವನನ್ನು ರೆಡ್‌ಮಂಡ್ ಎಂಬಾತನು ತುಪಾಕಿಯಿಂದ ಹೊಡದು ಕೊಂದನು. ಕಾರಣ ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಆದರೆ ರೆಡ್‌ಮಂಡಿಗೂ ಅವನ ಹೆಂಡತಿಗೂ ಜಗಳವಾಗುತ್ತಿತ್ತೆಂದೂ, ಲಾರ್ಡ್ ಎಂಬುವನು ಬಿಡಿಸಲು ಹೋದನೆಂದೂ ಆಗ ಇವನನ್ನು ತುಪಾಕಿಯಿಂದ ಅತನು ಹೊಡೆದು ಕೊಂದನೆಂದೂ ದೊರೆತಿರುವ ವರ್ತಮಾನದಿಂದ ತಿಳಿಯುಬರುತ್ತಾಗಿದೆ.

—

ಐರ್ಲಂಡಿನಲ್ಲಿ 161 ವರ್ಷಗಳಿಂದ ಪ್ರಕಟಿಸಲ್ಪಡುತ್ತಿದ್ದ ಫ್ರೀಮೆನ್ಸ್ ಜರ್ನಲ್ ಎಂಬ ಪತ್ರಿಕೆಯು ನಿಲ್ಲಿಸಲ್ಪಟ್ಟಿದೆ.

—

ನಿನ್ನೆ ದಿವಸ ತಿನ್ನವೆಲ್ಲಿಯಲ್ಲಿ ಎಸ್. ಐ ರೈಲ್ವೆ ಆಂಡರ್‌ಗಾರ್ಡ್ ವೈಕೂಂ ಆಯಲ್ ಕಂಪೆನಿ ಮ್ಯಾನೇಜರ್ ಆಂಡ್ರೂಸ್‌ರವರ 2 ಪೆಟ್ಟಿಗೆಗಳನ್ನು ಒಡೆದು, ಅದರಿಂದ ಬೆಲೆಯುಳ್ಳ ಕೆಲವು ಸಾಮಾನುಗಳನ್ನು ಕದಿಯಲು ಹೊರಟಿದ್ದನೆಂದೂ, ಇದನ್ನೆಲ್ಲಾ ಹುವಾರಿನಿಂದ ನೋಡುತ್ತಿದ್ದ ಪೋಲೀಸನವನು ಇದನ್ನು ಸ್ಪೆಶ್ಟರಿಗೆ ತಿಳಿಸಲು ಅವರು ಈ ಆಂಡರ್‌ಗಾರ್ಡನ್ನು ದಸ್ತಗಿರಿ ಮಾಡಿದನೆಂದೂ, ಮೊಖದ್ದಮೆ ಮುಂದಿನ ತಿಂಗಳು 2 ಕ್ಕೆ ಇರುವದೆಂದೂ ತಿಳಿದುಬಂದಿದೆ.

—

ಅಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ಸು ಬೊಂಬಾಯಿನಲ್ಲಿ 14-15 ನೇ ಫೆಬ್ರವರಿಯಲ್ಲಿ ನಡೆಯುತ್ತದೆ.

—

ಮಾಂಡಲೆ ಅಸಿಸ್ಟೆಂಟ್ ಕಲೆಕ್ಟರನ್ನು ಕೆಲಸದಿಂದ ತೆಗೆದುಹಾಕಲು ವರ್ತಮಾನ ಬಂದಿದೆ. ಖಾಯಿಲೆಯಾಗಿದ್ದ ತನ್ನ ಹೆಂಡತಿಯನ್ನು ಜರಿಸಿ ಈಜಿಗೆ ಬಂದನೆಂದೂ ಆಗ ಯಾರಾದು ನಿನ್ನ ಹೆಂಡತಿಗೆ ಗಾಜಕುಮಾರಿಯನ್ನು ಕೊಡುವಳೆಂದು ತಿಳಿಸಲು, ಕಲೆಕ್ಟರ ಜೊತೆಯಲ್ಲೇ ಹೊರಟನು. ದಾರಿಯಲ್ಲಿ ಮುಂದಿ ಜನರು ಬಂದು ತುಂಬಾ ಕೆ ಆಸ್ಪತ್ರೆಗೆ ಸಾಗಿಸಿದರಾರೆ.

—

ಸ್ಕಾಟ್‌ಲೆಂಡ್ ಯಾರ್ಡಿನಲ್ಲಿ ಸಿ ನ್ನು ಪತ್ತೇದಾರಿ ಕೆಲಸಕ್ಕೆ ನೇಮಿಸಿಕೊಳ್ಳಾ ಅನುಮೋದಿತವಾಗಿದೆ.

Printed and published by K Krishna Rao at the SATYAV Press, Mysore